International Journal of Kannada Research 2017; 3(2): 21-26

International Journal of Kannada Research
www.kannadajournal.com

**ISSN: 2454–5813**
IJSR 2017; 3(2): 21-26
© 2017 IJKS
www.kannadajournal.com
Received: 06-02-2017
Accepted: 07-03-2017

**ಶ್ರೀನಿವಾಸ ದೊಡ್ಡಮನಿ**
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮೊ.ನಂ. ೯೯೧೬೪೯೩೪೫೦

**ಸಂಶೋಧನ ವಿದ್ಯಾರ್ಥಿ**
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮೊ.ನಂ. ೯೯೧೬೪೯೩೪೫೦

**Correspondence**
**ಶ್ರೀನಿವಾಸ ದೊಡ್ಡಮನಿ**
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮೊ.ನಂ. ೯೯೧೬೪೯೩೪೫೦

# ವೀರಶೈವ ಕಾವ್ಯಗಳಲ್ಲಿ ಅನಿಮಿಷನ ಕಥೆಯಲ್ಲಿನ ಮಾರ್ಪಾಡು : ತೌಲನಿಕ ವಿವೇಚನೆ

**ಶ್ರೀನಿವಾಸ ದೊಡ್ಡಮನಿ, ಸಂಶೋಧನ ವಿದ್ಯಾರ್ಥಿ**

ಹನ್ನೆರಡನೆಯ ಶತಮಾನವು ಭಕ್ತಿಯುಗ. ಕಾಯಕನಿಷ್ಠೆಯ ಮಹಾಶಿವಭಕ್ತರು ಅವತರಿಸಿದ ಕಾಲಘಟ್ಟ. ಅವರಲ್ಲಿ ಬಸವಣ್ಣನು ವಚನ ಸಾಹಿತ್ಯ ಚಳುವಳಿಯ ಮೂಲಕ ಹೊಸದೊಂದು ಸಾಮಾಜಿಕ ಕ್ರಾಂತಿಯನ್ನೆ ಮಾಡಿದನು. ಕೆಳವರ್ಗದವರಿಗೆ, ಮಹಿಳೆಯರಿಗೆ, ಸಾಮಾಜಿಕ ವಂಚಿತರಿಗೆ ಅಸ್ತಿತ್ವವನ್ನು ನೀಡಿದ ಸಮಾಜಸುಧಾರಕನಾಗಿದ್ದ ಬಸವಣ್ಣನನ್ನು ದೈವಪುರುಷರನ್ನಾಗಿ, ಪುರಾಣಿಕ ಪುರುಷನನ್ನಾಗಿ ಸೃಷ್ಟಿಸಿದ್ದು ಹದಿಮೂರನೆಯ ಶತಮಾನದ ಆದಿಭಾಗದಲ್ಲಿ. ಹರಿಹರ ಕವಿ ಬಸವಣ್ಣನ ಚರಿತ್ರೆಯನ್ನು ರಚಿಸುವವರೆಗೂ ಸಾಮಾನ್ಯರಲ್ಲಿ ಸಾಮಾನ್ಯನಾಗಿದ್ದ ವ್ಯಕ್ತಿ ದುತ್ತನೆ ದೇವರಾಗಿದ್ದಂತೂ ಸತ್ಯ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ; ಬಸವಣ್ಣನು ಶಿವನ ವಾಹನ ನಂದಿಯ ಅವತಾರ ಎಂಬುದನ್ನು ಮುಂದಿನ ಕವಿಗಳು ವಿಭಿನ್ನ ರೀತಿಯಲ್ಲಿ ತಮ ತಮಗೆ ತೋರಿಸಿದಂತೆ ಚಿತ್ರಿಸಿದ್ದೆ ಈ ಎಲ್ಲಾ ಗೊಂದಲಕ್ಕೆ ಕಾರಣ. ಅಲ್ಲಮಪ್ರಭು, ಚನ್ನಬಸವಣ್ಣನಂತ ಮಹಾಜ್ಞಾನಿಗಳು ಬಸವಣ್ಣನ ಪೂರ್ವಜನ್ಮಾಂತರಗಳನ್ನು ಕುರಿತು ವಚನ ರಚಿಸಿದ್ದರಿಂದ ಅದನ್ನೆ ಅನುಸರಿಸಿದ ಕವಿಗಳು ಅವನನ್ನು ಅವತಾರ ಪುರುಷನೆಂಬಂತೆ ಚಿತ್ರಿಸಿದ್ದಾರೆ.

ಬಸವಣ್ಣನ ಪೂರ್ವಜನ್ಮದೊಂದಿಗೆ ಅನಿಮಿಷನ ಕಥೆ ಸೇರಿಕೊಂಡಿದ್ದನ್ನು ವೀರಶೈವ ಕಾವ್ಯಗಳಲ್ಲಿ ಗುರುತಿಸಬಹುದು. ಇಲ್ಲಿ ಬಸವಣ್ಣನು ಅನಿಮಿಷನಿಗೆ ಗುರುವಾಗಿ ಆತ್ಮಲಿಂಗವನ್ನು ನೀಡಿದ್ದನ್ನು ಸಾಮಾನ್ಯವಾಗಿ ಎಲ್ಲಾ ಕಾವ್ಯಗಳು ಉಲ್ಲೇಖಿಸಿವೆ. ಆದರೆ ಸಂದರ್ಭ, ಸನ್ನಿವೇಶಗಳು ಮಾತ್ರ ಕವಿಗಳ ಅಭಿರುಚಿಗೆ ತಕ್ಕಂತೆಯೇ ರಚನೆಯಾಗಿವೆ. ಇವನು ಅಲ್ಲಮಪ್ರಭುವಿಗೆ ಲಿಂಗಕೊಟ್ಟ ವಿಚಾರವು ಸಾಮಾನ್ಯವಾಗಿದೆ. ಆದರೆ ಗಮನಿಸಬೇಕಾದದ್ದು ಎಂದರೆ, ಸಿಂಗಿರಾಜ ಕವಿಯು ಬಸವಣ್ಣನು ಮರ್ತ್ಯದಲ್ಲಿ ಜನಿಸಲು ಅನಿಮಿಷನೇ ಕಾರಣ ಎಂಬ ಸಂಗತಿ. ಹಾಗೆಯೇ ಹರಿಹರನಲ್ಲಿ ಅಲ್ಲಮನ ಗುರುವಾಗಿ, ನಂತರ ಅನಿಮಿಷನೆಂಬ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ. ಅದನ್ನು ಹೊರತುಪಡಿಸಿ, ಇವನು ಬಸವಣ್ಣನ ಶಿಷ್ಯನಾಗಿ ಕಾಣುವುದಿಲ್ಲ. ಅನಿಮಿಷನ ಕಥೆಯನ್ನು ರಚಿಸಿದ ಬಗೆ, ಎರಡು ರೀತಿಯಲ್ಲಿ ಸಾಗುತ್ತದೆ. ಒಂದು ವಚನಕಾರರು ಮತ್ತು ಹರಿಹರನು ಕಾಣುವ ರೀತಿ, ಮತ್ತೊಂದು ಸಿಂಗಿರಾಜ, ಮುರಗ ದೇಶಿಕರು, ಚೆನ್ನಪ್ಪ ಕವಿ, ಶಾಂತಲಿಂಗದೇಶಿಕರು ಅನುಸರಿಸಿದ ರೀತಿ.

ಅನಿಮಿಷನ ಕುರಿತಾಗಿ ಉಲ್ಲೇಖ ಮಾಡಿದ ಪ್ರಥಮಿಗರು ಎಂದರೆ, ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ ಇವರೆ ಆಗುತ್ತಾರೆ. ಅಲ್ಲಮನು ಸ್ವತಃ ತನ್ನ ಗುರು ಎಂಬುದನ್ನು ತನ್ನ ವಚನಗಳಲ್ಲಿ ಹೇಳಿಕೊಂಡಿದ್ದಾನೆ೧. ಬಸವಣ್ಣನವರೇ ತಮ್ಮ ವಚನದಲ್ಲಿ ತನ್ನ ಪ್ರಾಣಲಿಂಗವನ್ನು ಕೊಂಡ್ಯೊಯ್ದವನೆಂದು ಹೇಳಿದ್ದಾರೆ. ಚನ್ನಬಸವಣ್ಣನು ಅಲ್ಲಮನ ಗುರುವೆಂದು, ಬಸವಣ್ಣನ ಶಿಷ್ಯನೆಂದು ತನ್ನ ವಚನಗಳಲ್ಲಿ ದಾಖಲಿಸುತ್ತಾರೆ. ಇವರನ್ನು ಹೊರತುಪಡಿಸಿದರೆ, ನಾಗಲಾಂಬಿಕೆ, ಘಟ್ಟಿವಾಳಯ್ಯ, ಘನಲಿಂಗದೇವ ಮೊದಲಾದವರ ವಚನಗಳಲ್ಲಿ ಇವನ ಮಾಹಿತಿ ತಿಳಿದುಬರುತ್ತದೆ. ವಚನಕಾರರ ದೃಷ್ಟಿಯಲ್ಲಿ ಇವನು ವೃಷಭನ ಶಿಷ್ಯ ಹಾಗೂ ಅಲ್ಲಮನ ಗುರು. ಆದರೆ ಘನಲಿಂಗದೇವನ ದೃಷ್ಟಿಯಲ್ಲಿ ಇವನೊಬ್ಬ ವಿರಕ್ತ೧ ನಾಗಿ ಗೋಚರನಾಗುತ್ತಾನೆ. ಹೀಗಾಗಿ ವಚನಕಾರರು ಅನಿಮಿಷನನ್ನು ಸ್ಮರಿಸಿರುವುದು ಮುಂದೆ ರಚನೆಯಾದ ವೀರಶೈವ ಕಾವ್ಯಗಳಲ್ಲಿ ಇವನ ಕಥೆಯ ಬೆಳವಣಿಗೆಗೆ ನಾಂದಿಯಾದಂತೆ ತೋರುತ್ತದೆ. ಆ ವೀರಶೈವ ಕಾವ್ಯಗಳೆಂದರೆ; ‘ಹರಿಹರನ ರಗಳೆ’ಗಳು (೧೩ನೇ ಶತಮಾನ), ಚಾಮರಸನ ‘ಪ್ರಭುಲಿಂಗ ಲೀಲೆ’(೧೪೮೯), ಸಿಂಗಿರಾಜನ ‘ಸಿಂಗಿರಾಜಪುರಾಣ’(೧೫೦೦), ಮುರಗಿ ದೇಶಿಕೇಂದ್ರರ ‘ಹಮ್ಮೀರಕಾವ್ಯ’(೧೫೪೦), ವೀರಸಂಗಾರ್ಯ ಕವಿಯ ‘ನಂದಿ ಆಗಮ ವಚನ’(?),

ಚನ್ನಪ್ಪ ಕವಿಯ 'ಶಂಕರಲೀಲಾಮೃತ'(೧೭೫೦), ಶಾಂತಲಿಂಗದೇಶಿಕರ 'ಭೈರವೇಶ್ವರ ಕಥಾಮಣಿಸೂತ್ರರತ್ನಾಕರ'(೧೭ನೆಯ ಶತಮಾನ), ಕಾಡ ಕವಿಯ 'ಬಸವಶೀಖಾಮಣಿ'(೧೭೦೦) ಇವುಗಳ ಹಿನ್ನೆಲೆಯಲ್ಲಿ ಅನಿಮಿಷನ ಕಥೆಯನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವುದು ಆವಶ್ಯಕ. ಆದ್ದರಿಂದ ಅಧ್ಯಯನದ ಅನೂಕೂಲಕ್ಕಾಗಿ ಅವತಾರ ಕಲ್ಪನೆ, ವಸುದೀಪ್ಯನಾಗಿ ಜನನದ ಸಂದರ್ಭ, ಅರಣ್ಯ ಪ್ರವೇಶಕ್ಕೆ ಕಾರಣ, ಶಿವಲಿಂಗದರ್ಶನ ಸಂದರ್ಭ, ಲಿಂಗೈಕ್ಯ ವಿಚಾರ ಎಂದು ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ.

**ಅವತಾರ ಕಲ್ಪನೆ**

ಅನಿಮಿಷನ ಕಥೆಯನ್ನು ಮೊದಲು ಹೇಳಿದ ವೀರಶೈವ ಕವಿಯೆಂದರೆ ಹರಹರನೇ. ಪ್ರಭುದೇವರ ರಗಳೆಯಲ್ಲಿ ಇದು ಬರುತ್ತದೆ. ಆದರೆ ಅಲ್ಲಿ ಬಸವಣ್ಣನವರಿಗೂ ಇವನಿಗೂ ಯಾವುದೇ ಸಂಬಂಧವಿಲ್ಲದಿರುವುದು ಕಂಡುಬರುತ್ತದೆ. ಹರಿಹರ ಕವಿಯು ಅಲ್ಲಮನು ನೆಲವನ್ನು ಕೆರೆಯುತ್ತಿದ್ದಾಗ ಅಲ್ಲೊಂದು ಶಿವಾಲಯವು ದೊರಕುತ್ತದೆ. ಅದರಲ್ಲಿ ಅನಿಮಿಷನು ಲಿಂಗಮುದ್ರೆಯನ್ನಿಡಿದು ನಿಶ್ಚಲ ಸ್ಥಿತಿಯಲ್ಲಿರುತ್ತಾನೆ. ಆಗ ಅವನನ್ನು ಕಂಡು ಭಕ್ತಿಯಿಂದ ಕೈಮುಗಿಯಲು. ಆತನ ಕೈಯಲ್ಲಿದ್ದ ಲಿಂಗವು ಅಲ್ಲಮನ ಕೈಗೆ ಬಂದು ಸೇರುತ್ತದೆಂದು ಹರಿಹರನು ಹೇಳುತ್ತಾನೆ[೨].

ಚಾಮರಸನು ಅನಿಮಿಷನ ಕಥೆಯನ್ನು ಹೇಳಿದ್ದರೂ ಅದು ಹರಿಹರ ಕವಿಯಂತಿಲ್ಲ. 'ವನಪಾಲ ಗೊಗ್ಗಯ್ಯನನ್ನು ಭಕ್ತಿಯ ಕಡೆಗೆ ಸೆಳೆಯುವುದಕ್ಕಾಗಿ ಅಲ್ಲೊಂದು ವಿಸ್ಮಯವನ್ನುಂಟು ಮಾಡುತ್ತಾನೆ. ಗೊಗ್ಗಯ್ಯ ಅಗೆದ ಹೆಂಟೆಯ ಕೆಳಗೆ ನಿಮಿಷ ಮಾತ್ರದಲ್ಲೇ ಹೊಂಗಳಸವೊಂದನ್ನು ತೋರಿಸಿ, ಅದರ ಕೆಳಗೆ ಸಮಾಧಿಸ್ಥಾನದ ದೇವಾಲಯವನ್ನು ತೋರಿಸುತ್ತಾನೆ[೩]. ಇಬ್ಬರು ದೇವಾಲಯ ಹೊಕ್ಕು ಅನಿಮಿಷನನ್ನು ನೋಡಿ, ಅಲ್ಲಮನು ಅನಿಮಿಷನಿಂದ ಲಿಂಗವನ್ನು ಬೇಡಿ ಪಡೆದನೆಂದು'[೪] ಕವಿ ಹೇಳುತ್ತಾನೆ. ಇಲ್ಲಿ ಕವಿಯು ಹೇಳುವುದನ್ನು ನೋಡಿದರೆ, ಅಲ್ಲಮನೇ ಅನಿಮಿಷನು. ಸರ್ವಭಕ್ತರ ಮುಂದೆ ಅನಿಮಿಷನಿಂದ ಲಿಂಗವನ್ನು ಪಡೆಯುವುದಕ್ಕಾಗಿ ನಟನೆಯನ್ನು ಮಾಡಿದನೆಂದು ಚಾಮರಸನು ಹೇಳುತ್ತಾನೆ. ಹಾಗಾಗಿ ಅನಿಮಿಷನೆಂಬ ಪಾತ್ರದಸೃಷ್ಟಿ ಅಲ್ಲಮನದೆ ಎಂದಾಗುತ್ತದೆ. ಗೊಗ್ಗಯ್ಯನಿಗೆ ಭಕ್ತಿಯ ಆಳವನ್ನು ತಿಳಿಸುವುದಕ್ಕಾಗಿ ಸಾಂಕೇತಿಕ ರೂಪವಾಗಿ ಅನಿಮಿಷನನ್ನು ಬಳಸಿಕೊಂಡಂತೆ ತಿಳಿಸಲಾಗಿದೆ. ಇದಕ್ಕೆ ಕಾರಣ ಮಾಯೆಯನ್ನು ಸೋಲಿಸುವುದಕ್ಕಾಗಿ ಶಿವನೇ ಅಲ್ಲಮ ರೂಪಿಯಾಗಿ ಧರೆಗೆ ಬಂದುದರಿಂದ ಕವಿಯು ಈ ರೀತಿ ಹೇಳುತ್ತಾನೆ. ಹೀಗೆ ಚಾಮರಸನು ಅನಿಮಿಷ, ಅಲ್ಲಮ ಇಬ್ಬರು ಒಂದೇ ಎಂಬಂತೆ ಚಿತ್ರಿಸಿದ್ದಾನೆ. ನೋಡುಗರ ಕಣ್ಣಿಗೆ ಮಾತ್ರ ಅನಿಮಿಷನು ಇಲ್ಲಿ ಗುರುವಾಗಿ ಕಾಣುತ್ತಾನೆ.

ಸಿಂಗಿರಾಜ ಕವಿಯು ಈ ಇಬ್ಬರು ಹೇಳಿದ ಕಥೆಯನ್ನು ತನ್ನ ಕಾವ್ಯದಲ್ಲಿ ಬಸವಣ್ಣನು ಮರ್ತ್ಯಕ್ಕೆ ಬರಲು ಕಾರಣವೆಂಬಂತೆ ಅವತಾರದ ಕಥೆಯೊಂದನ್ನು ಹೆಣೆದಿದ್ದಾನೆ. ಬಸವಣ್ಣನ ಚರಿತ್ರೆಯನ್ನು ಹೇಳುವ ಕವಿಗಳಲ್ಲಿ ಅನಿಮಿಷನಿಗೂ, ಬಸವನಿಗೂ ಅವತಾರದ ಸಂಬಂಧಗಳನ್ನು ಕಲ್ಪಿಸಿ ಕಥೆ ಹೆಣೆದ ಮೊದಲ ಕಾವ್ಯವೇ ಸಿಂಗಿರಾಜಪುರಾಣ. ಇಲ್ಲಿ ಸಿಂಗಿರಾಜನು ವಚನಕಾರರ ಮತ್ತು ಹರಿಹರ ಕವಿಯ ಕಾವ್ಯಗಳನ್ನು ಅನುಸರಿಸಿರುವುದನ್ನು ಗುರುತಿಸಬಹುದು. ಸಿಂಗಿರಾಜಪುರಾಣದಲ್ಲಿ 'ಅನಿಮಿಷನು ದೇವಗಣದಲ್ಲಿದ್ದ ಓರ್ವ ಕೃತಪುರುಷ. ಇವನು ತನ್ನ ಚೇಷ್ಟಾ ಬುದ್ಧಿಯಿಂದ ವೃಷಭನ ಬಾಲದಿಂದ ಒಂದು ರೋಮವನ್ನು ಕಿತ್ತುದರ ಫಲವಾಗಿ, ವೃಷಭನು ಕೋಪಗೊಂಡು ಗಂಡುಶೈಲಕ್ಕೆ ಹೊರಟುಹೋಗುತ್ತಾನೆ[೫]. ಇದನ್ನು ತಿಳಿದು ನಾರದನು ಶಿವನಿಗೆ ಯಥಾಸ್ಥಿತಿಯನ್ನು ಹೇಳುತ್ತಾನೆ[೬]. ಇದರಿಂದ ಕುಪಿತನಾದ ಶಿವನು ಅನಿಮಿಷನಿಗೆ "ಆವಕಡೆಗೆ ನೀ ಕಳುಹಿದಾಯರಡೆಗೆ ಪೋಗಿ ವೃಷಭಾವತಾರನ ಕರೆದು ತಾರದೊಡೆ ಬಳಿಕ ನೀ ಸಾವೆ"[೭] ಎನ್ನುತ್ತ, ವೃಷಭನನ್ನು ಮರಳಿ ಕರೆತರುವಂತೆ ಅಪ್ಪಣೆ ಮಾಡುತ್ತಾನೆ. ಅದಕ್ಕಾಗಿ ವೃಷಭನಿದ್ದ ಬಕಾಸುರ ಸದನಕ್ಕೆ ತನ್ನ ಅತಿರಥ ಮಹಾರಥ ಸೈನಿಕರೊಡನೆ ಬಂದು ಅವನನ್ನು ಮರಳಿ ಕೈಲಾಸಕ್ಕೆ ಕರೆತರಲು ಪ್ರಯತ್ನಿಸಿದ ಯತ್ನ ವಿಫಲಾಗುತ್ತದೆ. ಇದರಿಂದ ಇರ್ವರಲ್ಲೂ ಕದನ ಹುಟ್ಟಿ ವೃಷಭನಿಗೆ ಜಯವಾಗುತ್ತದೆ. ಅಲ್ಲಿಂದ ವೃಷಭನು ಬಲಿಗ್ರಾಮ ಪ್ರದೇಶಕ್ಕೆ ಬಂದು ವಾಸವಾಗುತ್ತಾನೆಂದು' ಹೇಳುತ್ತಾನೆ[೮].

ಇಲ್ಲಿ ಸಿಂಗಿರಾಜನು ಅನಿಮಿಷನ ಕಥೆಯನ್ನು ಕೈಲಾಸದಿಂದ ಆರಂಭಿಸುತ್ತಾನೆ. ಆದರೆ ಕವಿಯು ಅನಿಮಿಷನ ಕಥೆಯನ್ನು ಕೈಲಾಸದಿಂದ ಗುರುತಿಸಿದ್ದಕ್ಕೆ ಕಾರಣವೇನೆಂಬುದು ಮಾತ್ರ ಗೊಂದಲಮಯವಾಗಿದೆ. ಬಸವನ ಚರಿತ್ರೆಯನ್ನು ಹೇಳಹೊರಟ ಸಿಂಗಿರಾಜನು ಅನಿಮಿಷನ ಕಥೆಯನ್ನು ಹೇಳಿದ್ದರ ಹಿನ್ನಲೆಯೇನು? ಎಂಬುದು ತಿಳಿಯದು. ಏಕೆಂದರೆ ಸಿಂಗಿರಾಜಪುರಾಣದಲ್ಲಿ ಅಲ್ಲಮನ ಕುರಿತಾದ ಕಥೆ ಎಲ್ಲಿಯೂ ಬರುವುದಿಲ್ಲ. ಬಸವಣ್ಣನ ಪವಾಡಗಳೇ ಇಲ್ಲಿನ ಮುಖ್ಯವಸ್ತು. ಹೀಗಿರುವಾಗ ಬಸವಣ್ಣನೊಂದಿಗೆ ಅನಿಮಿಷನನ್ನು ತಳುಕು ಹಾಕಿದ್ದರ ಉದ್ದೇಶ ಬೇರೆಯದೆ ಆದಂತಿದೆ. ಹರಿಹರ ಕವಿಯು ಪ್ರಭುದೇವರ ರಗಳೆಯಲ್ಲಿ ಉಲ್ಲೇಖಿಸಿದ ಅನಿಮಿಷನ ಕಥೆಯನ್ನೆ ಕವಿ ತನ್ನ ಕಾವ್ಯದಲ್ಲಿ ಮುಂದುವರೆಸಿದ್ದಾನೆ. ಅವತಾರ ಕಲ್ಪನೆಯಳಿ ಮೂಲಕ ಬಸವಣ್ಣನು ಮರ್ತ್ಯದಲ್ಲಿ ಜನಿಸುವುದಕ್ಕೆ ಅನಿಮಿಷನು ಅವನ ಪ್ರಾಣಲಿಂಗವನ್ನು ಪಡೆದು ಲಿಂಗಶೂನ್ಯನಾಗಿಸಿದ್ದೇ ಕಾರಣವೆಂದು ಹೇಳಹೊರಟಂತಿದೆ. ಹಾಗಾಗಿ ಅವತಾರದ ಕಥೆಯನ್ನು ಹೆಣೆದಂತೆ ತೋರುತ್ತದೆ.

ಹರಿಹರ, ಸಿಂಗಿರಾಜ ಕವಿಗಳಿಗಿಂತ ಭಿನ್ನವಾದ ನಿಲುವನ್ನು ಮುರಗಿ ದೇಶಿಕೇಂದ್ರ ಕವಿಯು ಹೇಳಿದ್ದಾನೆ. ಪಟ್ಟದಕಲ್ಲಿನ ರಾಜನಾಗಿದ್ದ ಮನುರಾಜನೇ ಅನಿಮಿಷನಾದನೆಂದು ಉಲ್ಲೇಖಿಸುತ್ತಾನೆ. ಹಮ್ಮೀರ ಕಾವ್ಯದಲ್ಲಿ ಹೇಳುವ ಕಥೆ ಹೀಗಿದೆ; "ಮನುರಾಜನು ರಾಜ್ಯವಿಸ್ತಾರ ಮಾಡಿದ ನಂತರ ಅವನು ವಿನೋದಕ್ಕಾಗಿ ಬೇಟೆಗೋಸ್ಕರ ವಸಂತಪುರದ ಸಮೀಪವಿರುವ ಕಾಡಿಗೆ ಬರುತ್ತಾನೆ[೯]. ಬೇಟೆಯಾಡಿ ಬಳಲಿದ್ದರಿಂದ ದಾಹವಾಗಿ ನೀರು ಕುಡಿಯಬೇಕೆಂಬ ಬಯಕೆಯಾಗುತ್ತದೆ. ಆದರೆ ಲಿಂಗದರ್ಶನವಿಲ್ಲದೆ ನೀರನ್ನು ಕುಡಿಯುವಂತಿರಲಿಲ್ಲ. ಹಾಗಾಗಿ ಲಿಂಗವನ್ನು ಹುಡುಕಿಕೊಂಡು ಬರುತ್ತಾನೆ[೧೦]. ಹತ್ತಿರದಲ್ಲಿಯೇ ಗೂಳಿಯ ರೂಪದಲ್ಲಿದ್ದ ವೃಷಭನನ್ನು ಕಂಡು ವಂದಿಸುವನು. ಲಿಂಗಮುದ್ರೆಗೆ ಆಧಾರವಾದ ಬಸವನನ್ನು ಪ್ರದಕ್ಷಿಣೆ ಹಾಕುತ್ತಾನೆ[೧೨]. ನಂದಿಯ ಮುಂದೆ ನಿಂತು ಭಕ್ತಿಯಿಂದ ನಮಸ್ಕರಿಸುವಾಗ ರಸನಾಗ್ರದಲ್ಲಿ ಇಷ್ಟಲಿಂಗ ಕಾಣುತ್ತದೆ. ಅದನ್ನು ಮನುರಾಜನು ನಾಲಗಿಯ ಕೆಳಗಡೆ ಕೈನೀಡಿ ಲಿಂಗವನ್ನು ಸ್ವೀಕರಿಸುತ್ತಾನೆ. ನಂತರ ನಂದಿಯು ಕೈಲಾಸಕ್ಕೆ ತೆರಳುತ್ತಾನೆ. ತನ್ನ ಗುರುವಿನಿಂದ ಪಡೆದ ಲಿಂಗವನ್ನು ಹೊಗಳುತ್ತ, ಅನಿಮಿಷ ದೃಷ್ಟಿಯಿಂದ ಇಷ್ಟಲಿಂಗವನ್ನು ಅವನು ನೋಡುತ್ತಿದ್ದುದರಿಂದ ಅಂದಿನಿಂದ ಅನಿಮಿಷನಾದನು"[೧೩] ಎಂದು ಹೇಳುತ್ತಾನೆ. ಇದರಿಂದ ಅನಿಮಿಷನಿಗೆ ಮನುರಾಜನೆಂಬ ಹೆಸರು ಇದ್ದಿತೆಂಬುದು ತಿಳಿಯುತ್ತದೆ. ಹರಿಹರ, ಸಿಂಗಿರಾಜ ಕವಿಯು ಹೇಳುವಂತೆ ಅನಿಮಿಷನೆಂಬುದು ಅವನ ಮೊದಲ ಹೆಸರಲ್ಲ ಎಂದಾಗುತ್ತದೆ. ಮುರಗಿ ದೇಶಿಕರು ಅನಿಮಿಷನನ್ನು ಐತಿಹಾಸಿಕ ವ್ಯಕ್ತಿ ಎಂಬಂತೆ ಚಿತ್ರಿಸಿದ್ದಾರೆ. ಚೆನ್ನಪ್ಪ ಕವಿಯಾಗಲಿ, ಶಾಂತಲಿಂಗ ದೇಶಿಕರಾಗಲಿ ಇದರ ಕುರಿತಾಗಿ ಯಾವುದೇ ಉಲೇಖವನ್ನು ಮಾಡಿಲ್ಲ. ವೀರಸಂಗಾರ್ಯ ಕವಿಯು ಮಾತ್ರ ನಾರದನೇ ನಂದಿ–ಅನಿಮಿಷರ

ಕಥೆಯನ್ನು ಶಿವನಿಗೆ ಹೇಳಿದನೆಂದು ತಿಳಿಯುತ್ತದೆ.

ಹೀಗೆ ವಚನಕಾರರು, ವೀರಶೈವ ಕವಿಗಳು ಹೇಳುವಂತೆ ಅನಿಮಿಷನು ಅಲ್ಲಮ, ಬಸವನಿಗಿಂತ ಪೂರ್ವದಲ್ಲಿದ್ದವನೆಂದಾಗುತ್ತದೆ. ಹಾಗಾಗಿ ಇವನು ಅಲ್ಲಮನಿಗೆ ನೇರವಾಗಿ ಗುರುವಿನ ಸ್ಥಾನದಲ್ಲಿದ್ದವನಲ್ಲ. ಇಲ್ಲವೆ ಅವನಿಗೆ ನೇರವಾಗಿ ದೀಕ್ಷೆಯನ್ನು ನೀಡಿದವನಲ್ಲ. ಆದ್ದರಿಂದ ಇವನು ಅಲ್ಲಮನ ಗುರುವು ಹೇಗಾದ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅದಕ್ಕೆ ಕವಿಗಳು ಸ್ವಾನುಭಾವದಿಂದ ಅಲ್ಲಮನೇ ಗುರುವೆಂದು ಒಪ್ಪಿಕೊಂಡಿದ್ದಾನೆಂದು ಹೇಳುತ್ತಾರೆ. ಆದರೆ ಶಿರಾಳಕೊಪ್ಪದ ಸಮೀಪದಲ್ಲಿ ಇಂದಿಗೂ 'ಅನಿಮಿಷನಕೊಪ್ಪಲು' ಎಂಬ ಗ್ರಾಮದಲ್ಲಿ ಅನಿಮಿಷನ ದೇವಾಲಯವಿದೆ. ಇದು ಅದೇ ವ್ಯಕ್ತಿಯ ದೇವಾಲಯ ಎಂಬುದು ಅಲ್ಲಿನ ಗ್ರಾಮೀಣರ ಅಭಿಪ್ರಾಯವಾಗಿದೆ. ಅಲ್ಲಿನ ಯಾವ ಶಾಸನಗಳಲ್ಲಿಯೂ ಅನಿಮಿಷನ ಹೆಸರು ಇರುವುದು ಕಂಡುಬರುವುದಿಲ್ಲ.

**ವಸುದೀಪ್ಯನಾಗಿ ಜನಿಸಿದ ಸಂದರ್ಭ**

ಅನಿಮಿಷನ ಜನನದ ವಿಚಾರದಲ್ಲಿ ಕವಿಗಳಲ್ಲಿ ಏಕತಾನತೆಯಿದೆ. ಹರಿಹರ, ಚಾಮರಸ ಕವಿಗಳನ್ನು ಹೊರತುಪಡಿಸಿ, ಉಳಿದ ಕವಿಗಳೆಲ್ಲರೂ ಪಟ್ಟದಕಲ್ಲಿನ 'ತ್ರೈಲೋಕ್ಯ ಚೂಡಾಮಣಿ' ಮತ್ತು 'ಮಹಲೇಖೆ' ದಂಪತಿಗಳ ಮಗನಾಗಿ ಜನಿಸಿದ್ದನೆಂದೆ ಹೇಳುತ್ತಾರೆ. ಈ ವಿಚಾರದಲ್ಲಿ ಎಲ್ಲ ಕವಿಗಳು ಸಿಂಗಿರಾಜನನ್ನೆ ಅನುಸರಿಸಿದ್ದಾರೆ. ವೀರಸಂಗಾರ್ಯನೆಂಬ ಕವಿಯು ಮಾತ್ರ ತಾಯಿಯ ಹೆಸರನ್ನು ಹೇಳದೆ, ಹಮ್ಮೀರ ರಾಜನು ತಂದೆಯೆಂದು ಹೇಳುತ್ತಾನೆ[14]. ಆದರೆ ರಾಜನ ಮಗನ ಹೆಸರನ್ನು ಹೇಳುವಲ್ಲಿ ಭಿನ್ನತೆಯಿದೆ. ಸಿಂಗಿರಾಜನು 'ವಸುದೀಪ್ಯ'ನೆಂದು ಕರೆದರೆ, ಚನ್ನಪ್ಪ ಕವಿಯು 'ಅನಿಮಿಷ'ನೆಂದು, ಶಾಂತಲಿಂಗದೇಶಿಕರು 'ವಸುದೀಶ'ನೆಂದು ಕರೆಯುತ್ತಾನೆ. ವೀರಸಂಗಾರ್ಯನು ಅನಿಮಿಷನೆಂದೆ ಕರೆಯುತ್ತಾನೆ. ಆದರೆ ವಚನಕಾರರಲ್ಲಾಗಲಿ, ಹರಿಹರನಲ್ಲಾಗಲಿ ಇವನು ರಾಜನ ಮಗನಾಗಿ ಜನಿಸಿದ್ದುದರ ಯಾವುದೇ ಮಾಹಿತಿಗಳಿಲ್ಲ.

ಸಿಂಗಿರಾಜ ಕವಿಯು ಬಸವನನ್ನು ಮರಳಿ ಕೈಲಾಸಕ್ಕೆ ಕರೆತರುವುದಕ್ಕಾಗಿಯೇ ಅನಿಮಿಷನು ಪಟ್ಟದಕಲ್ಲಿನಲ್ಲಿ ಜನಿಸುತ್ತಾನೆಂಬ ಕಾರಣವನ್ನು ನೀಡುತ್ತಾನೆ. ಅಲ್ಲದೇ ಮುರಗಿ ದೇಶಿಕರು ಇವನನ್ನು ಅಯೋಜನಿನನೆಂದು ಹೇಳುತ್ತಾನೆ. ಇಲ್ಲಿ ಅನಿಮಿಷನು ರಾಜದಂಪತಿಗಳಿಗೆ ಮಗನಾಗಿ ಜನಿಸುವುದಿಲ್ಲ. ಆದರೆ, ಉಳಿದ ಯಾವ ಕವಿಗಳೂ ಈ ವಿಚಾರವನ್ನು ಹೇಳುವುದಿಲ್ಲ. ವೀರಸಂಗಾರ್ಯನು ಮಾತ್ರ ಕಪಾಲಧರನು ಹಮ್ಮೀರರಾಜನಿಗೆ ಒಂದು ಪುಷ್ಪವನ್ನು ನೀಡುತ್ತಾನೆ. ಆ ಪುಷ್ಪವನ್ನು ಮಡದಿಗೆ ನೀಡಿದಾಗ ಅದನ್ನು ಅವಳು ಮುಡಿದ ತಕ್ಷಣ ಗರ್ಭವತಿ ಆದಳೆನ್ನುತ್ತಾನೆ[15]. ಇದು ಸರಿಯಲ್ಲ ಏಕೆಂದರೆ ಅಂಡಾಣು, ವೀರ್ಯಾಣುಗಳ ಸಂಗಮವಾದಾಗ ಗರ್ಭಧಾರಣೆಯಾಗುತ್ತದೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ. ಇಲ್ಲಿ ಪುಷ್ಪವನ್ನು ಮುಡಿದ ತಕ್ಷಣ ಗರ್ಭವತಿಯಾದಳೆಂಬುದು ವೈಜ್ಞಾನಿಕತೆಗೆ ವಿರುದ್ಧವಾದುದು. ಹೀಗೆ ಕವಿಗಳು ಅನಿಮಿಷನು ಐತಿಹಾಸಿಕ ವ್ಯಕ್ತಿ ಹೌದೋ? ಅಲ್ಲವೋ? ಎಂಬ ವಿಚಾರವು ಅನುಮಾನಕ್ಕೆ ಆಸ್ಪದವನ್ನು ನೀಡುತ್ತದೆ. ಶಾಸನಗಳಲ್ಲಿ ವಸುದೀಪ್ಯನ ಬಗೆಗಾಗಲಿ, ಮನುರಾಜನ ಬಗೆಗಾಗಲಿ ಉಲ್ಲೇಖಗಳಲ್ಲಿ. ಅನಿಮಿಷನು ಬೆಳೆಯುತ್ತ ದೊಡ್ಡವನಾದ ನಂತರ ತಂದೆಯೇ ಅವನನ್ನು ರಾಜನಾಗಿಸುತ್ತಾನೆ. ಹಮ್ಮೀರ ಕಾವ್ಯವು ಇವನು ರಾಜ್ಯವಿಸ್ತಾರ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಉಳಿದ ಕಾವ್ಯಗಳಲ್ಲಿ ಈ ವಿಚಾರ ಬರುವುದಿಲ್ಲ. ಆದರೆ ಬಾಲ್ಯದಿಂದಲೂ ಶಿವಲಿಂಗದರ್ಶನವಿಲ್ಲದೆ ಅನ್ನ ಆಹಾರಗಳನ್ನು ಸೇವಿಸದಿರುವ ನೇಮವನ್ನು ಕೈಗೊಂಡಿದ್ದು, ಅದನ್ನು ನಿತ್ಯವೂ ಪಾಲಿಸಿಕೊಂಡು ಬರುತ್ತಿದ್ದುದನ್ನು ಈ ಎಲ್ಲಾ ಕಾವ್ಯಗಳು ದಾಖಲಿಸುತ್ತವೆ.

ಹೀಗಾಗಿ ಅನಿಮಿಷನ ಹೆಸರಿನಲ್ಲಿ ಭಿನ್ನತೆಯಿರುವುದನ್ನು ಕಾಣಬಹುದು. ಅಲ್ಲದೆ ಇಲ್ಲಿ ಇವನೊಬ್ಬ ಮಹಾಶಿವಭಕ್ತನೆಂಬಂತೆ ತೋರುತ್ತಾನೆ. ಇದಕ್ಕೆ ಕಾರಣ, ಅನಿಮಿಷನ ಕುರಿತಾದ ಸ್ಪಷ್ಟವಾದ ಮಾಹಿತಿ ವಚನಕಾರರಲ್ಲಿ ಲಭ್ಯವಿಲ್ಲದಿರುವುದೇ ಆಗಿದೆ. ಹಾಗೆಯೇ ವಚನಗಳಲ್ಲಿ ಅನಿಮಿಷನು ಅಲ್ಲಮನ ಗುರುವಾಗಿ, ವೃಷಭನ ಶಿಷ್ಯನಾಗಿದ್ದನೆಂಬುದು ಕಾರಣವಾಗಿದೆ. ಅದಲ್ಲದೆ ಕವಿಗಳ ಕಾವ್ಯ ರಚನೆಯಲ್ಲಿ ಶತಮಾನಗಳ ಅಂತರಗಳಿರುವುದರಿಂದಲೂ ಈ ಭಿನ್ನತೆಗೆ ಕಾರಣವಿರಬಹುದೆನಿಸುತ್ತದೆ.

**ಅರಣ್ಯ ಪ್ರವೇಶಕ್ಕೆ ಕಾರಣ**

ಅನಿಮಿಷನು ಅರಣ್ಯ ಪ್ರವೇಶಕ್ಕೆ ಕಾರಣವನ್ನು ಸೂಚಿಸುವಲ್ಲಿಯೂ ಭಿನ್ನತೆಯಿದೆ. ಸಿಂಗಿರಾಜನು ಹೇಳುವಂತೆ ದೇಶ ನೋಡಲು ಹೊರಟ ರಾಜನು ಬಕಾಸುರ ಸದನಕ್ಕೆ ಬರುತ್ತಿದ್ದಂತೆ ಬೇಡರು ಬೇಟೆಗಾಗಿ ಎಬ್ಬಿಸಿದ ಗದ್ದಲದಿಂದ 'ಕೃತಜನ್ನ' ಎಂಬ ಕುದುರೆಯು ಬೆದರಿ ಕಾಡಿನ ಮಧ್ಯಕ್ಕೆ ಓಡಿಹೋಯಿತು[16] ಎನ್ನುತ್ತಾನೆ. ಆದರೆ ಉಳಿದ ಕಾವ್ಯಗಳಲ್ಲಿ ಕುದುರೆಯು ಕಾಡಿನ ಒಳಕ್ಕೆ ಓಡಿದ ಸನ್ನಿವೇಶದಲ್ಲಿ ವ್ಯತ್ಯವಿದೆ. ಬೇಟೆಗಾಗಿ ಕಾಡಿಗೆ ಬರುತ್ತಾನೆಂದು ಎಲ್ಲಾ ಕಾವ್ಯಗಳಲ್ಲಿಯೂ ಉಲ್ಲೇಖವಾಗಿದೆ. ಆದರೆ ಸಿಂಗಿರಾಜಪುರಾಣವು 'ಇವನು ತನ್ನ ದೇಶಕೋಶಗಳನ್ನು ನೋಡವುದಕ್ಕಾಗಿ ಬಂದನೆಂದು' ಹೇಳಿದ್ದರೆ, ಹಮ್ಮೀರ ಕಾವ್ಯ, ಭೈರವೇಶ್ವರ ಕಥಾಮಣಿಸೂತ್ರರತ್ನಾಕರದಲ್ಲಿ 'ಇವನು ವಿನೋದಕ್ಕಾಗಿ ಬೇಟೆಗೆ ಬಂದನೆಂದು' ಹೇಳುತ್ತಾರೆ. ಶರಣಲೀಲಾಮೃತದಲ್ಲಿ 'ಮಂತ್ರಿಗಳೊಡನೆ ಕಾಡಿಗೆ ಬಂದನೆಂದು' ಹೇಳುವ ಮೂಲಕ ಅನಿಮಿಷನನ್ನು ನೇರವಾಗಿಯೇ ಅರಣ್ಯಕ್ಕೆ ಬರುವಂತೆ ಚಿತ್ರಿಸಲಾಗಿದೆ. ಇಲ್ಲಿ ಕವಿಗಳು ತಮ್ಮ, ತಮ್ಮ ಅನೂಕೂಲಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಒಂದೇ ಸನ್ನಿವೇಶ ಕವಿಗಳಿಗಿಂತ ಕವಿಗಳಿಗೆ ಭಿನ್ನರೂಪ ಪಡೆದಿರುವುದನ್ನು ಕಾಣಬಹುದು.

ಹಾಗೆಯೇ ಕಾಡಿನ ಹೆಸರನ್ನು ಹೇಳುವಲ್ಲಿಯೂ ವ್ಯತ್ಯಾಸಗಳಾಗಿವೆ. ಸಿಂಗಿರಾಜನು 'ಬಕಾಸುರ ಸದನ'ವೆಂದರೆ, ಹಮ್ಮೀರ ಕಾವ್ಯವು 'ವಸಂತಪುರದ ಸಮೀಪದ ಕಾಡು' ಎಂದು ಉಲ್ಲೇಖಿಸುತ್ತದೆ. ಆದರೆ ಈ ವಸಂತಪುರವು ಯಾವುದೇ ಎಂಬುದು ಸ್ಪಷ್ಟವಿಲ್ಲ. ಕವಿಯೇ ಮಲಪ್ರಭ ನದಿಯ ದಂಡೆಯ ಮೇಲಿದೆ ಎಂದು ಉಲ್ಲೇಖಿಸುತ್ತದೆ. ಈ ಕಾವ್ಯ ಸಂಪಾದಕರಾದ ಎಂ.ಎಸ್.ಸುಂಕಾಪುರ ಅವರು "ಪಟ್ಟದಕಲ್ಲಿನಲ್ಲಿನ ಸಮೀಪದಲ್ಲಿರುವ ನಂದೀಕೇಶ್ವರ ಗ್ರಾಮವೇ ಆ ಸ್ಥಳವಾಗಿರಬೇಕೆಂದು ಊಹಿಸಲು ಅವಕಾಶವಿದೆ. ವಸಂತಪುರವೆಂದರೆ ಪಟ್ಟದಕಲ್ಲಿನ ಸಮೀಪದ ಗುಡ್ಡದಲ್ಲಿರುವ ಈಗಿನ ಬಸಾಪುರವಾಗಿರಲು ಸಾಕು"[17] ಎಂದಿದ್ದಾರೆ. ಅನಿಮಿಷನು ಪಟ್ಟದಕಲ್ಲಿನ ಸುತ್ತಮುತ್ತಲೇ ಇರುವುದರಿಂದ ಸುಂಕಾಪುರ ಅವರು ಹೇಳುವಂತೆ ಬಸಾಪುರವೇ ಆಗಿರಬೇಕು. ಭೈರವೇಶ್ವರ ಕಥಾಮಣಿಸೂತ್ರರತ್ನಾಕರವು ಸಿಂಗಿರಾಜನನ್ನೆ ಅನುಸರಿಸಿದ್ದರೆ, ಶರಣಲೀಲಾಮೃತದಲ್ಲಿ ಕಾಡಿನ ಹೆಸರಿನ ಉಲ್ಲೇಖವೇ ಇಲ್ಲ. ನಂದಿ ಆಗಮನ ವಚನದಲ್ಲಿ 'ಇವನು ವೈಹಾಳಿಗೆ ಹೊರಟು ಐಹೊಳೆ ರಾಮಲಿಂಗೇಶ್ವರ, ಕಪ್ಪಟಿ (ಕಪ್ಪಡಿ) ಸಂಗಮೇಶ್ವರ, ಕೂಡಲೇಶ್ವರ (ಕೂಡಲಸಂಗಮ), ಮಯೂರ ನಗರದ ಚಂದ್ರಮೌಳಿಶಂಕರ, ಬಸ್ಮಾಸುರನ ಕೊಂದ ಸ್ಥಳ, ಕೃಷ್ಣ ತೀರ್ಥ ಮೊದಲಾದ ಹತ್ತು ಪುಣ್ಯಸ್ಥಳಗಳಿಗೆ ಭೇಟಿ ನೀಡುತ್ತಾನೆ. ಈ ಪಯಣದಿಂದ ಆಯಾಸಗೊಂಡು ಬಳಲಿಕೆಯಾದಾಗ, ಕೃಷ್ಣವೇಣಿಯ ನದಿಯ ಮಧ್ಯ ಪ್ರದೇಶದಲ್ಲಿ ನಿಂತು, ಬಳಲಿಕೆ ನಿವಾರಣೆಗಾಗಿ ಲಿಂಗಪೂಜೆಯ ನೇಮ ಮಾಡಲು ಲಿಂಗವನ್ನು ಹುಡುಕುತ್ತ,

ಪರ್ವತಶೈಲಾಗ್ರದಲ್ಲಿ ಬಂದು ನಿಲ್ಲುತ್ತಾನೆಂದು'೧೮ ದಾಖಲಿಸುತ್ತದೆ. ಆದರೆ ಇವನೂ ಕಾಡಿನ ಹೆಸರನ್ನು ಹೆಸರಿಸಿಲ್ಲ. ಇದನ್ನೆಲ್ಲ ಗಮನಿಸಿದರೆ, ಕವಿಗಳು ತಮ್ಮ ಸುತ್ತಮುತ್ತಲಿನ ಕಾಡಿನ ಹೆಸರನ್ನೇ ಇಲ್ಲಿ ಉಲ್ಲೇಖಿಸಿರುವ ಸಾಧ್ಯತೆ ಎದ್ದು ಕಾಣುತ್ತದೆ.

**ಶಿವಲಿಂಗ ದರ್ಶನ ಸಂದರ್ಭ**

ಅನಿಮಿಷನು ಶಿವಲಿಂಗ ದರ್ಶನವನ್ನು ಮಾಡಿದ ಕ್ರಮದಲ್ಲಿಯೂ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಕಾಡಿಗೆ ಬಂದ ನಂತರ ತನ್ನ ಹಸಿವು ತೃಷೆಗಳನ್ನು ನೀಗಿಸಬೇಕೆಂದರೆ ಬಾಲ್ಯದಿಂದಲೂ ಪಾಲಿಸಿಕೊಂಡು ಬಂದ ಶಿವಲಿಂಗದ ದರ್ಶನವಾಗದ ಹೊರತು ಹಸಿವು ತೃಷೆಗಳನ್ನು ನೀಗಿಸುವಂತಿಲ್ಲ ಎಂಬ ವಿಚಾರವು ಎಲ್ಲಾ ಕಾವ್ಯಗಳಲ್ಲಿಯ ಸಾಮಾನ್ಯ ವಸ್ತು. ಆದರೆ ಲಿಂಗದರ್ಶನದ ಸಂದರ್ಭಗಳಲ್ಲಿ ಭಿನ್ನತೆಯಿದೆ. ಸಿಂಗಿರಾಜಪುರಾಣವು 'ಅರಣ್ಯದಲ್ಲಿ ತನ್ನ ಸೈನ್ಯವನ್ನು ತೊರೆದು ಬಂದ ಇವನು ಲಿಂಗದರ್ಶನಕ್ಕಾಗಿ ಕಾಡಿನಲ್ಲೆಲ್ಲ ಹುಡುಕಾಡುತ್ತಾನೆ. ಆಗ ಹತ್ತಿರದಲ್ಲೆ ಇದ್ದ ವೃಷಭನನ್ನು ಕಂಡು ಅವನ ಮೈಮೇಲಿನ ಲಿಂಗದರ್ಶನವನ್ನು ಮಾಡುವುದಕ್ಕಾಗಿ ಬಳಿಗೆ ಬಂದು ಬೇಡಿಕೊಳ್ಳುತ್ತಾನೆ. ಆಗ ವೃಷಭನು ವಿಚಾರಿಸಿದಾಗ ತಾನು ಪಟ್ಟದಕಲ್ಲಿನ ಅರಸನ ಮಗನೆಂದು, ಶಿವಲಿಂಗ ನೇಮ ಪೂರ್ಣವಾಗದೆ ಅನ್ನ ಆಹಾರಗಳನ್ನು ಸೇವಿಸುವುದಿಲ್ಲವೆಂಬುದನ್ನು ತಿಳಿಸಿದಾಗ ಕರುಣೆಗೊಂಡು ವೃಷಭನೇ "ಸಂಜೀವನಾಮೃತಾಂಗದಾತ್ಮಜ್ಯೋತಿ ನಿಷ್ಠೆಯ ನಿಧಾನ ಜಿಹ್ವಾಗ್ರದೊಳು ಲಿಂಗಮಂ ನಿಲಿಸಿ ನೀಡಿದನೆಂದು.."೧೯ ಉಲ್ಲೇಖಿಸುತ್ತದೆ. ಆದರೆ, ಹಮ್ಮೀರ ಕಾವ್ಯದಲ್ಲಿ 'ಬೇಟೆಯಾಡಿ ದಣಿದು ದಾಹಗೊಂಡಾಗ ಶಿವಲಿಂಗದರ್ಶನಕ್ಕಾಗಿ ಅರಸುತ್ತ ಬಂದ ಮನುರಾಜನಿಗೆ ಉತ್ತರ ದಿಕ್ಕಿನಲ್ಲಿ ಒಂದು ಗೂಳಿ ಮಲಗಿದ್ದು, ಅದರ ಮೈಮೇಲೆ ಲಿಂಗಮುದ್ರೆ ಇರುವುದನ್ನು ತಿಳಿದು, ಹತ್ತಿರಕ್ಕೆ ಬಂದು ಭಕ್ತಿಯಿಂದ ಬೇಡುವಾಗ ನಂದಿಯ ರಸನಾಗ್ರದಲ್ಲಿ ಇಷ್ಟಲಿಂಗ ಕಾಣುತ್ತಾನೆ. ಆಗ ಅವನು ಕೆಳಗೆ ಕುಳಿತು ಕೈ ನೀಡಿ, ಲಿಂಗವನ್ನು ಸ್ವೀಕರಿಸುದುದಾಗಿ' ಉಲ್ಲೇಖಿಸುತ್ತದೆ. ಅದೇ ಭೈರವೇಶ್ವರ ಕಥಾಮಣಿ ಸೂತ್ರರತ್ನಾಕರದಲ್ಲಿ 'ಕಳೆದುಕೊಂಡು ಕುದುರೆಯನ್ನು, ಲಿಂಗವನ್ನು ಹುಡುಕುತ್ತ ಒಂದೆರಡು ದಿನ ಕಳೆದಾಗ ಹಸಿವು ತೃಷೆಯನ್ನು ತಾಳಲಾರದೆ ಬಳಲುತ್ತಿದ್ದಾಗ ಮಂತ್ರಿಯು ಹತ್ತಿರದಲ್ಲೇ ಗೂಳಿಯ ತೊಡೆಯ ಮೇಲೆ ಲಿಂಗವಿರುವುದನ್ನು ತಿಳಿಸುತ್ತಾನೆ. ಅದರಿಂದ ಅವಸರವಾಗಿ ಬರುತ್ತಿದ್ದರೆ ಶಿವನೇ ಅದನ್ನರಿತು ಬಯಲಾಗುತ್ತಾನೆ. ಇದರಿಂದ ಮತ್ತೆರಡು ದಿನ ಉಪಾವಾಸವಿರಬೇಕಾಗುತ್ತದೆ. ಆಗ ಅನಿಮಿಷನು ವೇದಜ್ಞರನ್ನು ಕರೆಯಿಸಿ, ಗೂಳಿಯ ರೂಪಿನಲ್ಲಿ ಲಿಂಗವಿರುವುದನ್ನು ತಿಳಿದು, ಬಸವನಿಂದ ಲಿಂಗವನ್ನು ಪಡೆಯುವುದಕ್ಕಾಗಿ ತಪೋನಿರತನಾಗುತ್ತಾನೆ. ಇದನ್ನು ಕಂಡು ನಂದೀಶ್ವರನೇ ಸಕಲಗಣ ಸಮೇತನಾಗಿ ಬಂದು ಲಿಂಗದರ್ಶನ ನೀಡಿ ಗುರುವಾದನೆಂದು ಉಲ್ಲೇಖಿಸುತ್ತದೆ'೨೦. ನಂತರ ಇದರಿಂದಾಗಿ ಅನಿಮಿಷನೆಂಬ ಹೆಸರಾಯಿತೆಂದು ಈ ಕಾವ್ಯದಲ್ಲಿ ಹೇಳಲಾಗಿದೆ. ಕಾಡ ಕವಿಯು ಮಾರಹರನ ಅಪ್ಪಣೆಯ ಮೇರೆಗೆ ಅನಿಮಿಷನಿದ್ದಲ್ಲಿಗೆ ಬಂದು ಲಿಂಗದರ್ಶನ ನೀಡಿದನೆಂದು ಉಲ್ಲೇಖಿಸುತ್ತಾನೆ೨೧. ಆದರೆ ಹರಿಹರ, ಚಾಮರಸರು ಅನಿಮಿಷನಿಗೆ ಎಲ್ಲಿ ಲಿಂಗದರ್ಶನವಾಯಿತೆಂದು ಹೇಳುವುದಿಲ್ಲ. ಬದಲಾಗಿ ಅಲ್ಲಮನಿಗೆ ಬನವಾಸಿ ಪ್ರದೇಶದ ಹೊರ ವಲಯದಲ್ಲಿ ಲಿಂಗದರ್ಶನವಾಗಿದ್ದನ್ನು ದಾಖಲಿಸುತ್ತಾರೆ. ಅನಿಮಿಷನಿಗೆ ಪಟ್ಟದಕಲ್ಲಿನ ಸುತ್ತಮುತ್ತಲಿನ ಕಾಡಿನಲ್ಲಿ ಲಿಂಗದರ್ಶನವಾಗಿದ್ದು, ನಂತರ ದೇಶ ಸಂಚಾರ ಕೈಗೊಂಡು ಬನವಾಸಿಯ ಸಮೀಪದ ಅನಿಮಿಷನಕೊಪ್ಪಲಿಗೆ ಬಂದು ನೆಲೆಸಿರಬೇಕು.

ಒಟ್ಟಾರೆಯಾಗಿ ನೋಡುವುದಾದರೆ, ಸಿಂಗಿರಾಜ ಕವಿಯು ಅನಿಮಿಷನು ದೇಶಸಂಚಾರಕ್ಕೆ ಹೊರಟು, ದಾರಿ ತಪ್ಪಿ ಕಾಡಿಗೆ ಬಂದನೆಂಬುದನ್ನು ಒಪ್ಪಲಾಗದು. ಏಕೆಂದರೆ ಕಾಡಿನಲ್ಲಿ ಬೇಡರ ಗದ್ದಲ ಕೇಳಿ ಕೃತಜನ್ನ ಕುದುರೆಯು ಬೆದರಿತೆಂದು ಕವಿಯೇ ಹೇಳುವುದರಿಂದ ಶಬ್ದ ಬಂದೆಡೆಗೆ ಕುದುರೆ ಓಡಲು ಸಾಧ್ಯವಿಲ್ಲ. ಶಬ್ದದ ವಿರುದ್ಧ ದಿಕ್ಕಿನಲ್ಲಿ ಪ್ರಾಣಿಗಳು ಓಡುತ್ತವೆ. ಹೊರತು ಶಬ್ದಬಂದೆಡೆಗೆ ಓಡುವುದಿಲ್ಲ. ಹೀಗಾಗಿ ಹಮ್ಮೀರ ಕಾವ್ಯ ಹೇಳುವ ಹಾಗೆ ರಾಜನಾಗಿದ್ದ ಅವನು ಬೇಟೆಗೋಸ್ಕರ ಕಾಡಿಗೆ ಬಂದು, ಬಳಲಿ ಅನ್ನಾಹಾರ ಸೇವನೆಗಾಗಿ ಲಿಂಗ ನೇಮವನ್ನ ಪೂರೈಸಲು ಲಿಂಗವನ್ನು ಅರಸಿ, ನಂದಿಯು ಗೂಳಿಯ ರೂಪನಿಂದ ಬಂದು ದರ್ಶನ ನೀಡಿದನೆಂಬುದು ಸೂಕ್ತವೆನಿಸುತ್ತದೆ.

**ಲಿಂಗೈಕ್ಯದ ವಿಚಾರ**

ಅನಿಮಿಷನು ಲಿಂಗೈಕ್ಯನಾದ ವಿಚಾರದಲ್ಲಿಯೂ ಗೊಂದಲಗಳಿವೆ. ಹರಿಹರನು 'ಬನವಾಸಿ ಪುರದ ಹೊರಗಣ ಕಣಗಿಲೆ ತೋಟದಲ್ಲಿ ಅನಿಮಿಷನ ಶಿವಾಲಯವು ನೆಲದಲ್ಲಿ ಹೂತಿತ್ತೆಂದು, ಅಲ್ಲಿ ಅವನ ಶಿವಾಲಯವಿದ್ದುದನ್ನು, ಇನ್ನೂ ಕಣ್ಣಿನಲ್ಲಿಯೇ ಜೀವವಿಟ್ಟುಕೊಂಡಿದ್ದನ್ನು, ಅಲ್ಲಮನು ಕಾರಣಿಕ ಪುರುಷನೆಂದು ತಿಳಿದು, ಲಿಂಗವನ್ನು ನೀಡಿ ಪ್ರಾಣಬಿಟ್ಟನೆಂದು'೨೨ ದಾಖಲಿಸುತ್ತಾನೆ. ಸಿಂಗಿರಾಜನು ಅವನು ಪ್ರಾಣಲಿಂಗವನ್ನು ಪಡೆದ ನಂತರ ಶಿವಲಿಂಗ ದರ್ಶನವಾದ ಸಂತೋಷದಲ್ಲಿ ತನ್ನೆರಡು ಕೈಯಲ್ಲಿ ಲಿಂಗವನ್ನು ಹಿಡಿದು ದಿಟ್ಟಿಸುತ್ತ, ಅದರಲ್ಲೆ ಪ್ರಾಣವನ್ನೂ ಸೇರಿಸಿ, ಪ್ರಾಣತ್ಯಾಗ ಮಾಡುತ್ತಾನೆಂದು, ಸೈನಿಕರು ಅಲ್ಲಿಯೇ ಶವಸಂಸ್ಕಾರ ಮಾಡಿದರೆಂದು ದಾಖಲಿಸುತ್ತಾನೆ. ಅಂದರೆ ಶಿವಲಿಂಗ ದರ್ಶನವಾದ ತಕ್ಷಣವೇ ಅದೇ ಕಾಡಿನಲ್ಲಿ ಅನಿಮಿಷನು ಲಿಂಗೈಕ್ಯನಾದನೆಂಬುದು ಕವಿಯ ಅಭಿಪ್ರಾಯವಾಗಿದೆ. ಆದರೆ ಶರಣಲೀಲಾಮೃತದಲ್ಲಿ ಪ್ರಾಣಲಿಂಗವನ್ನು ಪಶುಪತಿಯಿಂದ ಬೇಡಿ, ಪಡೆದ ಅನಿಮಿಷನು ಧರೆಗಿಳಿದನೆಂದು ಹೇಳುತ್ತದೆ೨೩. ಇದರಿಂದ ಅವನು ಲಿಂಗವನ್ನು ಪಡೆದ ನಂತರ ಲಿಂಗೈಕ್ಯನಾದನೆಂದು ಹೇಳುವುದು ಕಷ್ಟ.

ಭೈರವೇಶ್ವರ ಕಥಾಮಣಿಸೂತ್ರರತ್ನಾಕರದಲ್ಲಿ ಅನಿಮಿಷನು ಮರಣ ಹೊಂದಿದ್ದನ್ನು ಉಲ್ಲೇಖಿಸಿದೆ. ಈ ಕಾವ್ಯದಲ್ಲಿ ಹೇಳುವಂತೆ; ನಂದೀಶ್ವರನು ಲಿಂಗವನ್ನು ನೀಡಿ, ತಾನೇ ಅನಿಮಿಷನೆಂಬ ಹೆಸರನ್ನಿಟ್ಟು ಹೋಗುತ್ತಾನೆ. ನಂತರ "ಆ ಲಿಂಗವನರ್ಚಿಸಿ ಕೀರ್ತಿಸಿ, ಅನಿಮಿಷದೃಷ್ಟಿಯಿಂದ ನೋಡಲು ಪರವಶನಾಗಿ, ಇತರೇತರ ಭಾವವಂ ಮಱದು ಭ್ರಮರಕೀಟನ್ಯಾಯದಂತೆ ಚರವಾದಂಗವು ಅಚರವಾದ ಲಿಂಗದಂತೆ ನಿಶ್ಚಲವಾಗಿರಲು, ಅನಿಮಿಷವೆಂಬ ಪೆಸರು ಪ್ರಸಿದ್ಧವಾಯಿತು"೨೪ ಎಂದಿದ್ದಾನೆ. ಮುಂದೆವರೆದು ಮಂತ್ರಿಗಳು ಇವನ ಸಮಾಧಿಯ ಮೇಲೆ ಶಿಲಾಗುಡಿ ನಿರ್ಮಿಸಿ, ಸುವರ್ಣದ ಕಳಸವಿಟ್ಟು ಮೃತ್ತಿಕೆಯನವಗವಿಸಿ ನೆಲಗುಡಿಯಂ ಮಾಡಿ ಹೋದರು. ಅದರ ಬಳಿ ಗೊಗ್ಗಯ್ಯನು ತೋಟವನ್ನು ನಿರ್ಮಿಸಿದನೆಂದು ಕಾವ್ಯದಿಂದ ತಿಳಿದುಬರುತ್ತದೆ. ಅಲ್ಲಮನು ಲಿಂಗವನ್ನು ಪಡೆದನೆಂದು ಹೇಳುತ್ತದೆ.

ಹಮ್ಮೀರ ಕಾವ್ಯದಲ್ಲಿ 'ಶಿವಲಿಂಗ ಪಡೆದ ನಂತರ ಅವನು ಲಿಂಗದೇವ, ಯೋಗೀಶ್ವರನಾಗುತ್ತಾನೆ. ಅಲ್ಲಿಂದ ತನ್ನ ಅರಸತ್ವವನ್ನು ತೊರೆದು, ದೇಶ ಕೋಶಗಳನ್ನು ತಿರುಗಿ, ಶಿವಯೋಗಸಮಾಧಿಯಲ್ಲಿ ವೇಳೆ ಕಳೆಯುತ್ತಾನೆ. ಅವನು ತಪೋನಿರತನಾದ ಭೂಮಿ ಅನಿಮಿಷಾರಣ್ಯವೆಂದು ಹೆಸರಾಗುತ್ತದೆ. ಪ್ರಭುಲಿಂಗಲೀಲೆಯಲ್ಲಿ 'ಅಲ್ಲಮನು ಮದ್ದಳೆಗನಾಗಿ ಬನವಾಸಿ ಪ್ರದೇಶಕ್ಕೆ ಬಂದ ನಂತರ ಮಾಯಾದೇವಿಯನ್ನು ಗೆದ್ದು, ಅನಿಮಿಷನ ಶಿವಯೋಗ ಸಮಾಧಿಯಿರುವಲ್ಲಿಗೆ ಬಂದು ಗೊಗ್ಗಯ್ಯನಿಗೆ ಇಷ್ಟಲಿಂಗದ ಮಹಿಮೆಯನ್ನು ತಿಳಿಹೇಳುತ್ತಾನೆ. ಅಲ್ಲಿರುವ ಸಮಾಧಿಯೊಳಗಿದ್ದ ಗುರು ಅನಿಮಿಷದೇವನನ್ನು ಸ್ವಾನುಭವದಿಂದ ತಿಳಿಯುತ್ತಾನೆ.

ಗೊಗ್ಗಯ್ಯನಿಂದ ಸಮಾಧಿಯಿರುವ ಸ್ಥಳದ ಒಂದು ಕಡೆಯಲ್ಲಿ ನೆಲವನ್ನು ಅಗೆದು ಅಲ್ಲಿ ಶಿವಾಲಯವಿರುವುದನ್ನು ಗುರುತಿಸುತ್ತಾನೆ. ಆ ದೇವಾಲಯದೊಳಗಿದ್ದ ಅನಿಮಿಷನ ಕೈಯಲ್ಲಿದ್ದ ಲಿಂಗವನ್ನು ಪಡೆದನೆಂದು'೨೫ ಉಲ್ಲೇಖಿಸುತ್ತದೆ. ಅಂದರೆ ಆಗಲೇ ಅನಿಮಿಷನು ಸಮಾಧಿಸ್ಥನಾದುದ್ದನ್ನು ಈ ಕಾವ್ಯವು ತಿಳಿಸುತ್ತದೆ.

ಅನಿಮಿಷನ ಶಿವಯೋಗಸಮಾಧಿಯಾದದ್ದನ್ನು ಎಲ್ಲಾ ಕಾವ್ಯಗಳು ಉಲ್ಲೇಖಿಸಿವೆ. ಆದರೆ ಸಿಂಗಿರಾಜಪುರಾಣ, ಭೈರವೇಶ್ವರ ಕಥಾಮಣಿಸೂತ್ರರತ್ನಾಕರವು ಕಾಡಿನಲ್ಲಿಯೇ ಪ್ರಾಣತ್ಯಾಗ ಮಾಡಿದ್ದನ್ನು ಹೇಳಿದರೆ, ಶರಣಲೀಲಾಮೃತವು ಧರಗಿಳಿದನೆನ್ನುತ್ತದೆ. ಪ್ರಭುದೇವರ ರಗಳೆ ಮತ್ತು ಹಮ್ಮೀರ ಕಾವ್ಯವು 'ಬನವಾಸಿಯ ಪ್ರದೇಶದಲ್ಲಿ ಶಿವಯೋಗ ಸಮಾಧಿ'ಯಾಗಿದ್ದನೆಂದು ಉಲ್ಲೇಖಿಸಿದೆ. ಇಲ್ಲಿ ಕವಿಗಳು ಅನಿಮಿಷನಿಗೆ ಐತಿಹಾಸಿಕ ಸ್ಥಾನವನ್ನು ಒದಗಿಸಲು ಮಾಡಿದ ಪ್ರಯತ್ನವು ಎದ್ದು ಕಾಣುತ್ತದೆ. ಆದರೆ ಅನಿಮಿಷನ ಕುರಿತಾಗಿ ವಚನ, ವೀರಶೈವ ಕಾವ್ಯಗಳನ್ನೊರತುಪಡಿಸಿ, ಶಾಸನಗಳಲ್ಲಿ ಉಲ್ಲೇಖವಿರುವುದು ಕಂಡುಬರುವುದಿಲ್ಲ.

ಒಟ್ಟಾರೆಯಾಗಿ ಅನಿಮಿಷನ ಕಥೆಯನ್ನು ಹೇಳುವಲ್ಲಿ ಕವಿಗಳಲ್ಲೇ ಗೊಂದಲವಿರುವುದನ್ನು ಗುರುತಿಸಬಹುದು. ವಚನಕಾರರು 'ವೃಷಭನ ಶಿಷ್ಯ'ನೆಂದು, 'ಅಲ್ಲಮನ ಗುರು' ಎಂದು ಹೇಳಿದ್ದರಿಂದ ಅವನಿಗೂ ಒಂದು ಅಸ್ಥಿತ್ವವನ್ನು ಕೊಡುವ ಪ್ರಯತ್ನವನ್ನು ಮೊದಲು ಹರಿಹರನು ಪ್ರಭುದೇವ ರಗಳೆಯಲ್ಲಿ ಮಾಡಿದನು. ಅದನ್ನೇ ಅನುಸರಿಸಿದ ಸಿಂಗಿರಾಜನು ಅವನಿಗೊಂದು ಅವತಾರವನ್ನು ಹಾಗೂ ಐತಿಹಾಸಿಕ ನೆಲೆಯನ್ನು ಒದಗಿಸಿದನು. ಇದನ್ನೇ ಆಧರಿಸಿದ ಸಿಂಗಿರಾಜನ ನಂತರ ಬರುವ ವೀರಶೈವ ಕವಿಗಳು ಅನಿಮಿಷನ ಕಥೆಯನ್ನು ತಮ್ಮ ತಮ್ಮ ಪ್ರತಿಭೆಯಿಂದ ಹಲವಾರು ಮಾರ್ಪಾಡುಗಳ ಮೂಲಕ ಕಾವ್ಯ ರಚಿಸಿದ್ದನ್ನು ಇಲ್ಲಿ ಗುರುತಿಸಬಹುದು. ಆದರೆ ಅನಿಮಿಷನೆಂಬವನು ಐತಿಹಾಸಿಕ ವ್ಯಕ್ತಿ ಎಂಬುದನ್ನು ನಂಬಲು ಯಾವುದೇ ಅಡ್ಡಿಯಿಲ್ಲ. ಆದರೆ ಅನಿಮಿಷನಿಗೆ ಲಿಂಗಕೊಟ್ಟದ್ದರಿಂದ ಮರ್ತ್ಯಕ್ಕೆ ಬಂದನೆಂಬುದು ನಿಜವಲ್ಲವೆಂಬುದನ್ನು ಸಿದ್ಧರಾಮನ ವಚನವೊಂದು ನಮಗೆ ದಾಖಲೆಯನ್ನು ಒದಗಿಸುತ್ತದೆ. ಆ ವಚನ ಹೀಗಿದೆ;

> "ಕೇಳ ಕೇಳಾ, ಎಲೆ ಅಯ್ಯಾ
> ಬಸವಣ್ಣನು ಅನಿಮಿಷಂಗೆ ಲಿಂಗವ ಕೊಟ್ಟ ಕಾರಣ ಮರ್ತ್ಯಕ್ಕೆ ಬಂದನೆಂಬರು
> ಸಟೆ ಸಟೆ ಆ ನುಡಿಯ ಕೇಳಲಾಗದು, ಅದೇನು ಕಾರಣವೆಂದಡೆ
> ಜೈನ ಚಾರ್ವಾಕ ಕಾಳಾಮುಖ ಎನಿಸುವ ಷಡ್ದರ್ಶನಾಗಳು ಹೆಚ್ಚಿ
> ವಿಭೂತಿ ರುದ್ರಾಕ್ಷಿ ಪಂಚಾಕ್ಷರವನರಿಯದೆ
> ನರಕ್ಕೆ ಭಾಜನಾವಾಗಿ ಪೋಪರೆಂದು
> ದೇವರು ನಂದೀಕೇಶ್ವರನ ಮುಖವ ನೋಡಲು
> ಆ ಪ್ರಶ್ನೆಯಿಂದ ಬಂದನಯ್ಯ ಬಸವಣ್ಣ ಪರಹಿತಾರ್ಥವಾಗಿ. . ."೨೬

ಸಿದ್ಧರಾಮೇಶ್ವರನ ಅಭಿಪ್ರಾಯದ ಪ್ರಕಾರ ಜೈನ, ಚಾರ್ವಾಕ, ಕಾಳಾಮುಖ ಮೊದಲಾದವರಿಗೆ ಮೋಕ್ಷ ನೀಡುವುದಕ್ಕಾಗಿ ಬಂದನೆಂದು ತಿಳಿಯುತ್ತದೆ. ಇದರಿಂದ ಸಿಂಗಿರಾಜ ಕವಿಯು ಹೇಳುವಂತೆ ವೃಷಭನು ಅನಿಮಿಷನಿಗೆ ಲಿಂಗವನ್ನು ನೀಡಿ, ಲಿಂಗಶೂನ್ಯನಾಗಿ ಮರ್ತ್ಯಕ್ಕೆ ಬಂದನೆಂಬ ಅವತಾರದ ಕಥೆ ಸುಳ್ಳು ಎಂದಾಗುತ್ತದೆ.

ಒಟ್ಟಾರೆಯಾಗಿ ಈ ಎಲ್ಲಾ ಕಾವ್ಯಗಳಲ್ಲಿನ ಭಿನ್ನತೆಗಳನ್ನು ಗಮನಿಸಿದರೆ, ವೀರಶೈವ ಕವಿಗಳು ಬಸವಣ್ಣನ ಮಹತ್ವವನ್ನು ಹೆಚ್ಚಿಸುವುದಕ್ಕೆ ಹಾಗೂ ಅನಿಮಿಷನಿಗೂ ಪೌರಾಣಿಕರ ಹಿನ್ನೆಲೆಯನ್ನು ಒದಗಿಸುವ ಪ್ರಯತ್ನವಿರಬೇಕೆಂಬುದನ್ನು ಸೂಚ್ಯವಾಗಿ ತಿಳಿಯಬಹುದು. ಅಲ್ಲದೆ ಕವಿಗಳು ತಮ್ಮ ತಮ್ಮ ಪ್ರತಿಭೆಯ ಅಭಿವ್ಯಕ್ತಿಗಾಗಿಯೂ ಈ ರೀತಿಯ ಮನೋಭಾವಗಳು ಕಂಡುಬರುತ್ತವೆ. ಏನೆ ಆದರು ಅನಿಮಿಷನ ಕಥೆಯು ಕವಿಗಳ ಮನೋಧರ್ಮಕ್ಕನುಗುಣವಾಗಿ ರಚನೆಯಾಗಿರುವುದಂತೂ ಸತ್ಯ.

**ಅಡಿಟಿಪ್ಪಣಿ**

೧. ಸಮಗ್ರ ವಚನ ಸಂಪುಟ–೧೧, ಎಸ್.ಶಿವಣ್ಣ (ಸಂ), ವ.ಸಂ–೭೬೪
೨. ಹರಿಹರನ ರಗಳೆಗಳು– ಎಂ.ಎಂ.ಕಲಬುರ್ಗಿ (ಸಂ), ಪ್ರಭುದೇವ ರಗಳೆ, ಸಾಲು–೨೦೦–೨೮೦, ಪು. ೩೦೨–೩೦೩
೩. ಚಾಮರಸನ ಪ್ರಭುಲಿಂಗ ಲೀಲೆ, ಎಸ್.ವಿದ್ಯಾಶಂಕರ (ಗದ್ಯಾನುವಾದ) ಗತಿ–೧೧, ಪ–೧೮, ಪು. ೧೬೬
೪. ಪೂರ್ವೋಕ್ತ, ಗತಿ–೧೧, ಪ–೧೯, ೨೦, ೨೫, ಪು. ೧೬೬–೧೬೮
೫. ಸಿಂಗಿರಾಜ ಪುರಾಣ, ಎಚ್.ದೇವಿರಪ್ಪ (ಸಂ), ಸಂ–೨ ಪ–೪೨, ಪು.೨೫
೬. ಪೂರ್ವೋಕ್ತ ಸಂ–೨ ಪ–೫೬, ಪು.೨೮
೭. ಪೂರ್ವೋಕ್ತ ಸಂ–೩ ಪ–೩, ಪು.೨೯
೮. ಪೂರ್ವೋಕ್ತಸಂ–೩ ಪ–೪೭, ಪು. ೩೯
೯. ಮುರಗಿ ದೇಶಿಕೇಂದ್ರರ ಹಮ್ಮೀರಕಾವ್ಯ, ಎಂ.ಎಸ್.ಸುಂಕಾಪುರ (ಸಂ), ಪ್ರಕರಣ–೪, ಪ–೩೭ರ ನಂತರದ ವಚನ, ಪು. ೭೨
೧೦. ಪೂರ್ವೋಕ್ತ ಪ್ರಕರಣ–೪, ಪ–೭೫ರ ನಂತರದ ವಚನ, ಪು. ೮೧
೧೧. ಪೂರ್ವೋಕ್ತ, ಪ್ರಕರಣ–೪, ಪ–೭೯ ರ ನಂತರದ ವಚನ, ಪು. ೮೨
೧೨. ಪೂರ್ವೋಕ್ತ, ಪ್ರಕರಣ–೫, ಪ–೨೮ರ ನಂತರದ ವಚನ, ಪು. ೯೦
೧೩. ವೀರಸಂಗಾರ್ಯ ಕವಿಯ ನಂದಿ ಆಗಮ ವಚನ, ಮುದ್ರಣ. ಬಳ್ಳಾರಿ ಶಂಕರವಿಲಾಸ ಮುದ್ರಾಕ್ಷರಶಾಲೆ, ಸಂಧಿ–೨, ಪ–೩, ಪು. ೧೧
೧೪. ಪೂರ್ವೋಕ್ತ, ಸಂಧಿ–೨, ಪ–೮,೯, ಪು. ೧೨
೧೫. ಸಿಂ.ಪು. ಸಂ–೪ ಪ–೨೩, ೨೪ ಪು.೪೬
೧೬. ಹಮ್ಮೀರಕಾವ್ಯ, ಮುನ್ನುಡಿಯಿಂದ ಪು. ಥತು
೧೭. ವೀರಸಂಗಾರ್ಯನ ನಂದಿ ಆಗಮ ವಚನ, ಸಂಧಿ–೨, ಪ–೧೮ ರಿಂದ ೨೬, ಪು.೧೪–೧೫
೧೮. ಸಿಂ.ಪು. ಸಂ–೪, ಪ–೩೧, ಪು. ೪೮
೧೯. ಹಮ್ಮೀರಕಾವ್ಯ, ಪ್ರಕರಣ–೫, ಪ–೮ರ ನಂತರದ ವಚನ, ಪು. ೮೫
೨೦. ಕಾಡ ಕವಿಯ ಬಸವಶಿಖಾಮಣಿ, ಬಿ.ಎಸ್.ಸಣ್ಣಯ್ಯ(ಸಂ), ಸಂ–೧, ಪ–೬೧, ೬೨, ಪು.೯
೨೧. ಹರಿಹರನ ಪ್ರಭುದೇವರ ರಗಳೆ, ಸಾಲು–೨೫೬–೨೯೦, ಪು–೩೦೩
೨೨. ಚನ್ನಪ್ಪ ಕವಿಯ ಶಂಕರಲೀಲಾಮೃತ, ಶ್ರೀ ಶಿವಬಸವಸ್ವಾಮಿಗಳು (ಸಂ), ಸಂ–೪, ಪದ್ಯ–೧೮ ರ ನಂತರದ ವಚನ, ಪು ೧೦೦–೧೦೧
೨೩. ಶಾಂತಲಿಂಗದೇಶಿಕರ ಭೈರವೇಶ್ವರ ಕಥಾಮಣಿಸೂತ್ರರತ್ನಾಕರ, ಆರ್.ಸಿ.ಹೀರೇಮಠ ಮತ್ತು ಎಂ.ಎಸ್.ಸುಂಕಾಪುರ (ಸಂ), ೨೫೪ ನೆ ಕಥೆ ಪು. ೩೩

೨೪.ಪ್ರಭುಲಿಂಗಲೀಲೆ, ಗತಿ–೧೧, ಪ–೧೮, ೧೯, ೨೦, ಪು.೧೬೬

೨೫.ಸಮಗ್ರ ವಚನ ಸಂಪುಟ–೪, ಎಸ್. ವಿದ್ಯಾಶಂಕರ(ಸಂ), ಸಿದ್ದರಾಮೇಶ್ವರನ ವಚನ, ವ.ಸಂ.೪೭೭, ಪು.೧೩೪